MYSORE AGRICULTURAL DEBTORS (Temp. Protection) BILL, 1973—MOTION TO CONSIDER

—(Contd.)

†ಶ್ರೀ ಎ. ಶಂಕರ ಆಳ್ವ:—ಮಾನ್ಯ ಅಧ್ಯಕ್ಷರೇ, ಈ ಮಸೂದೆಯ ವಿಷಯದಲ್ಲಿ ೧೧ ಜನರು ಭಾಗವಹಿಸಿದ್ದಾರೆ. ಅದರೆ ಅವರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಸರ್ಕಾರದವರು ಎಷ್ಟು ಬಡ್ಡಿ ವಸೂಲುಮಾಡುತ್ತಾರೆ, ಸಹಕಾರ ಸಂಸ್ಥೆಗಳು ಎಷ್ಟು ಬಡ್ಡಿಯನ್ನು ವಸೂಲುಮಾಡುತ್ತಾರೆ, ಬೇಸಾಯಗಾರರಿಗೆ ಅನೇಕ ರೀತಿಯಲ್ಲಿ ತೊಂದರೆಯಾಗುತ್ತಿದೆಂಬುದಾಗಿ ಅನೇಕ ವಿಷಯಗಳನ್ನು ಹೇಳಿದರು. ಆದರೆ ನನ್ನ ಅರಿಕೆ ಏನೆಂದರೆ, ಈ ಮೈಸೂರು ಆಗ್ರಿಕಲ್‌ಚರಲ್ ಡೆಬ್ಟರ್ಸ್ ರಿಲೀಫ್ ಬಿಲ್ ಹೈಕೋರ್ಟಿನಲ್ಲಿ ಸ್ಟ್ರೈಕ್ ಡೌನ್ ಮಾಡಿದ್ದಾರೆ. ಸರ್ಕಾರ ಇದರ ಬಗ್ಗೆ ಸುಪ್ರೀಂ ಕೋರ್ಟಿಗೆ ಆಪೀಲ್ ಮಾಡಿರುವುದರಿಂದ ಇದು ಇನ್ನೂ ಅಲ್ಲಿ ಪೆಂಡಿಂಗನಲ್ಲಿದೆ. ಇದನ್ನು ಪಾಸ್ ಮಾಡಿದರೆ ಯಾವ ರೀತಿಯಲ್ಲಿ ರೈತರಿಗೆ ಇದರಿಂದ ಉಪಕಾರ ಮಾಡಬೇಕೆಂಬುದನ್ನು ಪ್ರತ್ಯೇಕವಾಗಿ ಆಲೋಚನೆ ಮಾಡಬೇಕು. ಅವನು ಬಡ್ಡಿ ಜಾಸ್ತಿ ಕೊಡಬಾರದು. ಆದಷ್ಟು ಅದನ್ನು ಅವನಿಗೆ ಕಡಿಮೆ ಮಾಡಬೇಕೆಂದು ಹೇಳುವುದು ಸರಿ. ಈಗ ಅನೇಕ ತರಹ ಕಾನೂನುಗಳು ಬೇರೆ ಬೇರೆ ಭಾಗದಲ್ಲಿ ಬೇರೆಬೇರೆ ರೀತಿಯಲ್ಲಿವೆ. ರೈತರಿಗೆ ಸಾಮಾನ್ಯವಾಗಿ ಡೆಬ್ಟ್ಸ್ ಇರುತ್ತದೆ. ಆದರೂ ಅವನು ತನ್ನ ಆಸ್ತಿಯನ್ನು ಮಾರಾಟ ಮಾಡಬಾರದೆಂದಿರುತ್ತಾನೆ. ಆದರೆ ಅವನ ಬಗ್ಗೆ ಕೋರ್ಟಿಗೆ ಅರ್ಜಿ ಹಾಕಿದರೆ ಅವನ ಡೆಬ್ಟ್ಸ್ ಬಗ್ಗೆ ಎಷ್ಟು ಬಡ್ಡಿ ಬಿಡಬೇಕು, ಎಷ್ಟು ರಿಯಾಯಿತಿ ಕೊಡ ಬೇಕು—ಮುಂತಾದ ಗೊಂದಲಗಳು ಬರುತ್ತಲೇ ಇವೆ. ಆದ್ದರಿಂದ ಅವನ ಆಸ್ತಿ ಮಾರಾಟವಾಗದ ಹಾಗೆ ಸಹಾಯ ಮಾಡುವುದಕ್ಕೆ ಅನೇಕ ಕಾರಣಗಳಿವೆ. ಇಂಥಾದ್ದನ್ನು ಆಗ್ರಿಕಲ್‌ಚರಲ್ ಡೆಬ್ಟರ್ಸ್ ರಿಲೀಫ್ ಆಕ್ಟ್‌ನಲ್ಲಿ ಒಳನೇ ಕಲಂ ಪ್ರಕಾರ ತೆಗೆದುಹಾಕಿದೆ. ಅದರ ನಂತರ ರಿಟ್ ಹೈಕೋರ್ಟಿಗೆ ಹೋಗಿ ಅದನ್ನು ಅಲ್ಲಿ ತೆಗೆದುಹಾಕಿ ಅಂದರೆ ಅದು ಪುನಃ ರಿವೈವ್ ಆಗುವುದಿಲ್ಲ ಇದರಿಂದ ಬೇಸಾಯಗಾರರಿಗೆ ಏನೂ ಪ್ರೊಟೆಕ್ಷನ್ ಇಲ್ಲ. ಸದ್ಯಕ್ಕೆ ಅವನ ಆಸ್ತಿ ಹಾಗೆಯೇ ಇರಬೇಕು. ಅದನ್ನು ಸದ್ಯಕ್ಕೆ ಮಾರಾಟಮಾಡಬಾರದು. ಈಗ ಇದರ ಬಗ್ಗೆ ಯಾವರೀತಿ ಹೊಸ ಕಾನೂನು ಬರುತ್ತದೋ ಅದನ್ನು ಜಾರಿಗೆ ಕೊಡುವುದಕ್ಕೆ ಸಾಧ್ಯವಿರುತ್ತದೆ. ಈಗ ಟೆಂಪೊರರಿಯಾಗಿ ಅಂತಹವರಿಗೆ ಎರಡು ವರ್ಷಗಳವರೆಗೆ ಇದರ ಬಗ್ಗೆ ಪ್ರೊಟೆಕ್ಷನ್ ಕೊಡಲಾಗಿದೆಯೆಂದು ಹೇಳಬೇಕಾಗಿದೆ. ಇನ್ನು ಬೇರೆ ಏನೂ ಇಲ್ಲ. ಇದರಲ್ಲಿ ಯಾವ ಆತಂಕವು ಬರುವುದಿಲ್ಲ. "Notwithstanding anything contained in any law judgment or order of any court or competent authority all proceedings in execution of any decree or order of any court or competent authority for the sale of any land held by an agricultural debtor for realisation of any debt due by him shall, for a period of two years from the Commencement of this Act, be stayed" ಎಂದು

ಇನೇ ಸೆಕ್ಷನ್ನಿನಲ್ಲಿ ಹೇಳಿದೆ ಅವನು ತನ್ನ ಆಸ್ತಿಯನ್ನು ಮಾರಕೂಡದು ಎಂಬುದು ಇದರಲ್ಲಿರುವ ಅಂಶ. ಅಷ್ಟಲ್ಲದೆ ಬೇರೆ ಯಾವುದೂ ಇದರಲ್ಲಿ ಅಡಕವಾಗಿಲ್ಲ. ಈ ಮಸೂದೆಯ ಮೇಲೆ ಮಾತನಾಡಿದ ಸದಸ್ಯರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ.

Stranger in the Chamber

(At this Stage a Stranger was seen sitting in the L. A. Chamber)

ಶ್ರೀ ಕೋಣಂದೂರು ಲಿಂಗಪ್ಪ.—ಯಾರೋ ಒಬ್ಬರು ಈ ಸದನದ ಸದಸ್ಯರಲ್ಲವೆಂದು ಕಾಣುತ್ತದೆ ಅವರು ಅತ್ತ ಕಡೆ ಬಂದು ಕುಳಿತಿದ್ದಾರೆ. ಅವರು ಯಾರೆಂಬುದು ಗೊತ್ತಿಲ್ಲ.

(At this Stage the Stranger left the Chamber)

Mr. DEPUTY SPEAKER.—He may get out.

Sri C. M. ARUMUGHAM.—Sir, you must find out who he is. If he is not a member he has no right to be here. First of all, he has entered.. ...

Sri A. SHANKAR ALVA.—As a matter of fact, if it had happened in Parliament he will be fined Rs. 500/-

Mr. DEPUTY SPEAKER.—It is there in the Constitution itself. I am examining the matter.

Sri C. M. ARUMUGHAM.—He must be fined.

Mr. DEPUTY SPEAKER.—Members will have a little patience. Even if he has done, this he is the citizen of India. I will have the matter examined. Our officers have gone to seize him. I will have the whole matter examined.

Sri C. M. ARUMUGHAM.—A stranger is found inside the Hall. Not only that, he was also sitting. Therefore you must take proper action.

Mr. DEPUTY SPEAKER.—Whatever possible action can be taken, will be taken.

ಶ್ರೀ ಕಾಗೋಡು ತಿಮ್ಮಪ್ಪ.—ಈ ರೀತಿಯಾಗಿ ಈ ಸದನದಲ್ಲಿ ಒಂದು ಸಾರಿ ಬಿಟ್ಟರೆ, ಇದೇ ತರಹ ಮುಂದೆ ಬೇರೆ ಯಾವುದೇ ಸಂದರ್ಭದಲ್ಲಿ ಇಲ್ಲಿ ಬಂದು ಕುಳಿತುಕೊಂಡು ಏನು ಬೇಕಾದರೂ ಅನಾಹುತ ಮಾಡುವುದಕ್ಕೆ ಸಾಧ್ಯವಿದೆ. ಆದ್ದರಿಂದ ಈ ಸಭೆಯಲ್ಲಿ ಪ್ರವೇಶಮಾಡಿದವನಿಗೆ ಈ ಸದನದಲ್ಲಿಯೇ ಸರಿಯಾದ ತಕ್ಕ ಪ್ರಾಯಶ್ಚಿತ್ತ ಆಗಬೇಕಾಗಿದೆ.